ದಿನಾಂಕಃ 06-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್ ಟಿ ವಕೀಲರಿಂದಃ**

ಎರಡು ಮನೆಗಳ ಸಂಬಂಧವಾಗಿ ದಾವೆ ಹೂಡಿರುತ್ತೇನೆ. ಎ ಷೆಡ್ಯೂಲ್ ಸ್ವತ್ತಿನ ಪೂರ್ವ ಪಶ್ಚಿಮ 13.41 ಮೀಟರ್ ಮತ್ತು ಉತ್ತರ ದಕ್ಷಿಣ 9.44 ಮೀಟರ್ ಇದೆ ಆದರೆ ಎಷ್ಟು ಅಡಿ ಎಂದು ತಿಳಿದಿರುವುದಿಲ್ಲ. ಎ ಷೆಡ್ಯೂಲ್ ಸ್ವತ್ತನ್ನು ನಾನು ಅಳತೆ ಮಾಡಿಸಿರುವುದಿಲ್ಲ. ಬಿ ಷೆಡ್ಯೂಲ್ ಸ್ವತ್ತು ಎಷ್ಟು ಅಡಿ ಇದೆ ಎಂದು ತಿಳಿದಿರುವುದಿಲ್ಲ. ಸಾಕ್ಷಿ ಮುಂದುವರೆದು ಪೂರ್ವ ಪಶ್ಚಿಮ 7.6 ಮತ್ತು ಉತ್ತರ ದಕ್ಷಿಣ 12 ಮೀಟರ್ ಇದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನೂ ಸಹ ನಾನು ಅಳತೆ ಮಾಡಿರುವುದಿಲ್ಲ. ಎ ಷೆಡ್ಯೂಲ್ ಸ್ವತ್ತಿನಲ್ಲಿ ನಾನು, ತಮ್ಮ ಚನ್ನಕೇಶವ, ಅವರ ಹೆಂಡತಿ ಯಶೋಧ, ಅತ್ತಿಗೆ ದ್ರಾಕ್ಷಾಯಿಣಿ ಮತ್ತು ಅವರ ಮಕ್ಕಳು ಉಮೇಶ ಮತ್ತು ಪೃಥ್ವಿ ವಾಸವಾಗಿದ್ದೇವೆ. ಎ ಷೆಡ್ಯೂಲ್ ಸ್ವತ್ತಿನಲ್ಲಿ ಮತ್ತು ಬಿ ಷೆಡ್ಯೂಲ್ ನಲ್ಲಿ ನಾವು ವಾಸವಾಗಿದ್ದೇವೆ ಆದರೆ ಬಿ ಷೆಡ್ಯೂಲ್ ನಲ್ಲಿ ಅಡುಗೆ ಮಾಡುತ್ತೇವೆ. ದ್ರಾಕ್ಷಾಯಿಣಿ ಬಸವರಾಜ್ ರವರ ಹೆಂಡತಿ ಹಾಗೂ ಬಸವರಾಜ್ ರವರು ತೀರಿಕೊಂಡಿರುತ್ತಾರೆ. ನನ್ನ ಅಕ್ಕ ಪ್ರೇಮಾಳನ್ನು ಕೋಡಮಗ್ಗೆಯ ಯಲ್ಲಾಭೋವಿ ರವರಿಗೆ ಮದುವೆ ಮಾಡಿಕೊಟ್ಟಿದ್ದೇವೆ.

ದಾವಾ ಎ ಮತ್ತು ಬಿ ಷೆಡ್ಯೂಲ್ ನಾಲ್ಕು ಜನರ ಹೆಸರಿನಲ್ಲಿದೆ. ಆ ನಾಲ್ಕು ಜನರೆಂದರೆ ನಾನು, ಪ್ರೇಮಾ, ಬಸವರಾಜು ಮತ್ತು ಚನ್ನಕೇಶವ. ದಾವೆಯನ್ನು ನಾನು ಒಬ್ಬನೇ ಹೂಡಿರುತ್ತೇನೆ. ದಾವಾ ಸ್ವತ್ತುಗಳು ನಮ್ಮ ಹೆಸರಿಗೆ ಹೇಗೆ ಬಂತು ಎಂದು ಮಾಹಿತಿ ಇರುವುದಿಲ್ಲ. ನನ್ನ ತಾತನ ಕಾಲದಿಂದಲೂ ದಾವಾ ಆಸ್ತಿಯಲ್ಲಿ ವಾಸವಾಗಿರುತ್ತೇವೆ. ನಮ್ಮ ಮನೆಗಳನ್ನು ನಿರ್ಮಿಸಿ ಅಂದಾಜು 70 ವರ್ಷ ಆಗಿರಬಹುದು. ಸದರಿ ಮನೆಗಳನ್ನು ಕಟ್ಟುವಾಗ ನಾವು ಇರಲಿಲ್ಲ ಮತ್ತು ಕಟ್ಟಿರುವುದನ್ನೂ ಸಹ ನೋಡಿರುವುದಿಲ್ಲ. ಎ ಷೆಡ್ಯೂಲ್ ಸ್ವತ್ತಿನ ಉತ್ತರಕೆ ಃ ರಸ್ತೆ, ಪಶ್ಚಿಮಕ್ಕೆ ಃ ದೇವಸ್ಥಾನ, ದಕ್ಷಿಣಕ್ಕೆ ಃ ಪ್ರತಿವಾದಿಯ ಸ್ವತ್ತು, ಪೂರ್ವಕ್ಕೆ ಃ ಬಸವರಾಜ್ ರವರ ಸ್ವತ್ತು. ಸದರಿ ಬಸವರಾಜು ನನ್ನ ಸ್ವಂತ ಹಿರಿಯ ಅಣ್ಣ. ಬಿ ಷೆಡ್ಯೂಲ್ ನ ಉತ್ತರಕ್ಕೆ ಃ ರಸ್ತೆ, ಪೂರ್ವಕ್ಕೆ ಃ ರಸ್ತೆ, ಪಶ್ಚಿಮಕ್ಕೆ ಃ ಪ್ರತಿವಾದಿ ತಿಮ್ಮಾಭೋವಿ, ದಕ್ಷಿಣಕ್ಕೆ ಃ ಸುಂಕಮ್ಮ ರವರ ಸ್ವತ್ತು.

ಎ ಮತ್ತು ಬಿ ಷೆಡ್ಯೂಲ್ ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಸ್ವತ್ತುಗಳು ಇರುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿರುತ್ತೇನೆ. ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1 ರಲ್ಲಿ ದಕ್ಷಿಣಕ್ಕೆ ಪ್ರತಿವಾದಿ ಹೆಸರು ನಮೂದು ಇರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಅವರ ಮಾವನ ಹೆಸರು ಇರಬಹುದು ಎಂದು ನುಡಿಯುತ್ತಾರೆ. ಎ ಮತ್ತು ಬಿ ಷೆಡ್ಯೂಲ್ ಮಧ್ಯೆ ಇರುವ ಪ್ರತಿವಾದಿಯ ಸ್ವತ್ತು ಪ್ರಸ್ತುತ ಯಾರ ಹೆಸರಿನಲ್ಲಿದೆ ಎಂದು

ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿ ಸ್ವತ್ತನ್ನು ಯಾರಿಂದ ಖರೀದಿ ಮಾಡಿದರು ಎಂದು ನನಗೆ ತಿಳಿದಿರುವುದಿಲ್ಲ. ಪ್ರತಿವಾದಿಯ ಸ್ವತ್ತಿನ ದಾಖಲೆ ನೋಡಿರುವುದಿಲ್ಲ. ಪ್ರತಿವಾದಿಯ ಮನೆ ಮಣ್ಣಿನ ಗೋಡೆಯಿಂದ ಮಾಡಲಾಗಿದೆ ಎಂದರೆ ಸರಿ. ನಮ್ಮ ಮನೆಗಳಿಗೆ ಸೀಮೆಂಟ್ ಉಪಯೋಗಿಸಿರುವುದಿಲ್ಲ. ಪ್ರತಿವಾದಿಯು ಕ್ರಯಕ್ಕೆ ಪಡೆದಿರುವ ಮನೆ ನಮ್ಮ ಮನೆಗಳಿಗಿಂತ ಎತ್ತರವಾಗಿದೆ ಎಂದರೆ ಸಾಕ್ಷಿಯು ಒಂದು ಮನೆಗಿಂತ ಎತ್ತರವಾಗಿದೆ ಆದರೆ ಮತ್ತೊಂದು ಮನೆಗೆ ಸಮನಾಗಿದೆ ಎಂದು ನುಡಿಯುತ್ತಾರೆ. ನಿಪಿ-10 ರಲ್ಲಿ ಕಾಣುವ ನಮ್ಮ ಮನೆ ಪ್ರತಿವಾದಿಯ ಗೋಡೆಗಿಂತ ಕೆಳಗೆ ಇದೆ ಎಂದರೆ ಸರಿ.

ಪ್ರತಿವಾದಿಯು ತನ್ನ ಸ್ವತ್ತನ್ನು ಯಾವಾಗ ಖರೀದಿಸಿದರು ಎಂದು ನನಗೆ ತಿಳಿದಿರುವುದಿಲ್ಲ. ಪ್ರತಿವಾದಿಯ ಮನೆ ವಾಸಕ್ಕೆ ಯೋಗ್ಯವಾಗಿಲ್ಲದ ಕಾರಣ ಅದನ್ನು ಕೆಡವಿದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಪ್ರತಿವಾದಿಯು ಬಾಡಿಗೆಗೆ ನೀಡಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಯು ನಾವು ತಕರಾರು ಮಾಡಿದ ನಂತರ ತಮ್ಮ ಮನೆಯ ಹೆಂಚುಗಳನ್ನು ತೆಗೆದಿರುತ್ತಾರೆ. ಪುರಸಭೆಯವರು ಹೆಂಚುಗಳನ್ನು ತೆಗೆಯುವಾಗ ಸ್ಥಳಕ್ಕೆ ಬಂದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಬೀರೂರು ಪೋಲಿಸರು ಆ ಸಮಯದಲ್ಲಿ ಸ್ಥಳಕ್ಕೆ ಬಂದ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನ್ನ ಹಾಜರಿಯಲ್ಲಿ ಪುರಸಭೆಯವರು ಮತ್ತು ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲ. ಪುರಸಬೆಯವರು ಮತ್ತು ಪೋಲಿಸರು ಬಂದು ನಾವು ಪ್ರತಿವಾದಿಗೆ ತಕರಾರು ಮಾಡಬಾರದು ಎಂದು ನಮಗೆ ತಿಳಿಸಿ ಹೋಗಿದ್ದರು ಎಂದರೆ ಸರಿಯಲ್ಲ.

ನಿಪಿ-11 ರಲ್ಲಿ ಕಾಣುವ ಮರ ಇರುವ ಮನೆ ಪ್ರತಿವಾದಿಯದ್ದು ಎಂದರೆ ಸರಿ. ಪ್ರತಿವಾದಿಯ ಸ್ವತ್ತಿನಲ್ಲಿ 5-6 ವರ್ಷದಿಂದ ಗಿಡ ಮರಗಳು ಬೆಳೆದು ಹಾಳಾಗಿರುತ್ತದೆ. ನಾನು ಹಾಜರುಪಡಿಸಿರುವ ಛಾಯಾಚಿತ್ರಗಳನ್ನು ನಾನೇ ತೆಗೆಸಿರುತ್ತೇನೆ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.